# ಉತ್ಸರ್ಜನೋಪಾಕರ್ಮ ವೈಶಿಷ್ಟ್ಯ - ಯಜುರ್ವೇದದಂತೆ

ವೇದವಾರಿಧಿ ಪ. ರಾಮಾನುಜನ್

ಉಪೋದ್ಘಾತ - ಮಾನವನ ಈ ಲೋಕದಲ್ಲಿ ಮತ್ತು ಪರಲೋಕಗಳಲ್ಲಿ ಪಡೆಯಬಹುದಾದ ಸಕಲವಿಧ ಶ್ರೇಯಸ್ಸು-ಗಳಿಗೂ ಸಾಧನವನ್ನು ಉಪದೇಶಿಸುವುದಕ್ಕೆ ವೇದಗಳನ್ನು ಬಿಟ್ಟು ಬೇರೆ ಪ್ರಮಾಣವಿಲ್ಲ. ಇವುಗಳ ಮಾಹಾತ್ಮ್ಯ ಅಪಾರ-ವಾಗಿದ್ದು ನಮ್ಮ ಸನಾತನ ಧರ್ಮದಲ್ಲಿ ಇವುಗಳ ಅಧ್ಯಯನ ಅನಾದಿ ಕಾಲದಿಂದ ಸಂತತವಾಗಿ ಪರಂಪರಾಗತವಾಗಿದೆ. ಈ ವೇದಾಧ್ಯಯನದ ಸ್ವರೂಪ, ಅದರ ವೈಶಿಷ್ಟ್ಯ, ಅಧ್ಯಯನ, ಪ್ರವಚನ, ಪ್ರಚಾರ ಮುಂತಾದ ವಿಷಯಗಳನ್ನು ಕುರಿತು ಸ್ವಾಧ್ಯಾಯ ಬ್ರಾಹ್ಮಣವೆಂಬ ತೈತ್ತಿರೀಯಾರಣ್ಯಕದ ಎರಡನೇಯ ಪ್ರಶ್ನದಲ್ಲಿ ಸವಿಸ್ತರ ಪ್ರತಿಪಾದಿಸಲಾಗಿದೆ. ಅಲ್ಲಿ ವೇದಮಂತ್ರಗಳ ದ್ರಷ್ಟಾರರಾದ ಋಷಿಗಳಿಗೆ ನಾವು ಋಣಿಯಾಗಿದ್ದು ಅವರ ಕೃತಜ್ಞತಾಪೂರ್ವಕ ಸ್ಮರಣೆಯೊಂದಿಗೆ ವೇದದ ಅಧ್ಯಯನ, ಅಧ್ಯಾಪನವನ್ನು ಮಾಡಬೇಕೆಂದು ವಿಧಿಸಿದೆ. 'ಯಸ್ತಿತ್ಯಾಜ ಸಖಿವಿದಗ್ಂ ಸಖಾಯಂ ನ ತಸ್ಯವಾಚ್ಯಪಿ ಭಾಗೋ ಅಸ್ತಿ । ಯದೀಗ್ಂ ಶೃಣೋತ್ಯಲಕಗ್ಂ ಶೃಣೋತಿ ನ ಹಿ ಪ್ರವೇದ ಸುಕೃತಸ್ಯ ಪಂಥಾಮಿತಿ ತಸ್ಮಾತ್ ಸ್ವಾಧ್ಯಾಯೋಽಧ್ಯೇತವ್ಯಃ' (ತೈ.ಆ. ೨.೧೫). ಅದರಂತೆ ಉಪನಯನಾನಂತರ ವೇದಾಧ್ಯಯನದ ಆರಂಭಕ್ಕಾಗಿ ವಿಹಿತ-ವಾದ ಸಂಸ್ಕಾರ ಉಪಾಕರ್ಮವೆನ್ನಲ್ಪಡುತ್ತದೆ. ಈ ಅಧ್ಯಯನ ನಿಯಮಪೂರ್ವಕವಾದಾಗ ಉಪವೇದ, ಉಪಾಂಗಗಳ ಅಧ್ಯಯನಕ್ಕಾಗಿ ಏಳೂವರೆ ತಿಂಗಳ ಕಾಲ ಮೀಸಲಾಗಿ ನಾಲ್ಕೂವರೆ ತಿಂಗಳು ಸಾಂಗವೇದಾಧ್ಯಯನಕ್ಕೆ ವಿಧಿಸಲಾಗಿದೆ. ಆಗ ಉತ್ಸರ್ಜನ ಈ ನಾಲ್ಕೂವರೆ ತಿಂಗಳ ಅವಧಿಯ ನಂತರ ಮಾಡಲ್ಪಡುತ್ತದೆ. ಇನ್ನು ಇದರ ವಿವರಗಳನ್ನು ಕ್ರಮಶಃ ನೋಡೋಣ.

'ಶ್ರಾವಣ್ಯಾಂ ಪ್ರೌಷ್ಠಪದ್ಯಾಂ ವಾ ಉಪಾಕೃತ್ಯ ಯಥಾವಿಧಿ । ಯುಕ್ತಶ್ಛಂದಾಂಸ್ಯಧೀಯೀತ ಮಾಸಾನ್ ವಿಪ್ರೋಽರ್ಧ-ಪಂಚಮಾನ್ ॥' (ಮ.ಸ್ಮೃ. ೪.೯೫) ಎಂದು ಮನುಸ್ಮೃತಿಯಲ್ಲಿ ಹೇಳಿರುವಂತೆ ಉಪನಯನಾನಂತರ ವಟುವಿಗೆ ವೇದಾಧ್ಯಯನಕ್ಕಾಗಿ ವಿಹಿತವಾಗಿರುವ ಸಂಸ್ಕಾರವು 'ಉಪಾಕರ್ಮ', ಅಂದರೆ - ವೇದಾಭ್ಯಾಸದ ಪ್ರಾರಂಭ, ಎಂದು ಹೇಳಲಾಗುತ್ತದೆ. ಇದು ಶ್ರಾವಣ ಅಥವಾ ಪ್ರೋಷ್ಠಪದದ ಹುಣ್ಣಿಮೆಯಲ್ಲಿ ಮಾಡಬೇಕಾದುದು. ಆಪಸ್ತಂಬರ ಅನುಸಾರ ಬೆಳೆಗಳು ಮೊಳಕೆಗೆ ಬಂದಿರುವ ಕಾಲದಲ್ಲಿ ಇದು ವಿಹಿತ. 'ಶ್ರವಣಾಪಕ್ಷ ಓಷಧೀಷು ಜಾತಾಸು ಹಸ್ತೇನ ಪೌರ್ಣಮಾಸ್ಯಾಂ ವಾ ಅಧ್ಯಾಯೋಪಾಕರ್ಮ' (ಆ.ಗೃ.ಸೂ. ಉಪಾಕರ್ಮೋತ್ಸರ್ಜನಪಟಲ. ೨). ಬೋಧಾಯನರ ಮತದಲ್ಲಿ ಆಷಾಢ-ದಲ್ಲಿಯೂ ಮಾಡಬಹುದು. 'ಶ್ರಾವಣ್ಯಾಂ ಪೌರ್ಣಮಾಸ್ಯಾಂ ಕ್ರಿಯೇತ ಅಪಿ ವಾ ಆಷಾಢ್ಯಾಮ್' (ಬೋ.ಗೃ.ಸೂ. ೩.೧.೧). ಬೆಳೆಗಳು ಮೊಳಕೆ ಬಿಡದಿದ್ದಾಗಲೋ ಅಥವಾ ಪ್ರಥಮೋಪಾಕರ್ಮಕ್ಕೆ ಶ್ರಾವಣದಲ್ಲಿ ಶುಕ್ರಮೌಢ್ಯವಿದ್ದಾಗಲೋ, ಆಶೌಚಾದಿಗಳಿಂದ ಅವಕಾಶವಿಲ್ಲದಿದ್ದಾಗಲೋ ಪ್ರೋಷ್ಠಪದದಲ್ಲಿ, ಗ್ರಹಣಾದಿದೋಷವಿದ್ದರೆ ಆಷಾಢದಲ್ಲಿಯೂ ಮಾಡಲಾಗುತ್ತದೆ. 'ಸತ್ಸಂತಾನಪ್ರಸೂತ-ಸದಾಚಾರನಿಷ್ಠ-ಆತ್ಮಗುಣೋಪೇತ-ವೇದವಿದಾಚಾರ್ಯ-ಉಪನೀತಸ್ಯ ವ್ರತ-ನಿಯಮ-ವಿಶೇಷ-ಯುಕ್ತಸ್ಯ ಗುರುಮುಖ-ಉಚ್ಚಾರಣ-ಅನೂಚ್ಚಾರಣ-ಪೂರ್ವಕಂ ಅಕ್ಷರರಾಶಿ-ಗ್ರಹಣ-ಫಲಂ ಅಧ್ಯಯನಮ್' ಎಂದು ಶ್ರೀಭಾಷ್ಯದಲ್ಲಿ ಅನುಗೃಹೀತವಾಗಿದೆ. ಗುರುಕುಲಪದ್ಧತಿಯಲ್ಲಿ ವಟುವು ಆಚಾರ್ಯಕುಲದ-ಲ್ಲಿದ್ದು ಗುರುಶುಶ್ರೂಷೆಯೊಡನೆ ಅವಹಿತನಾಗಿ ನಿಯಮಪುರಸ್ಸರವಾಗಿ ವಿದ್ಯೆಯನ್ನು ಕಲಿಯುವಾಗ 'ಅತ ಊರ್ಧ್ವಂ ತು ಛಂದಾಂಸಿ ಶುಕ್ಲೇಷು ನಿಯತಃ ಪಠೇತ್ । ವೇದಾಂಗಾನಿ ಚ ಸರ್ವಾಣಿ ಕೃಷ್ಣಪಕ್ಷೇಷು ಸಂಪಠೇತ್ ॥' (ಮ.ಸ್ಮೃ. ೪.೯೮), ಎಂಬಂತೆ ವೇದಾಧ್ಯಯನವನ್ನು ಶುಕ್ಲಪಕ್ಷಗಳಲ್ಲಿಯೂ, ವೇದಾಂಗಗಳನ್ನು ಕೃಷ್ಣಪಕ್ಷಗಳಲ್ಲಿಯೂ ಕಲಿಯುತ್ತಾನೆ. ಆ ರೀತಿಯ ನಿಯತವಾದ ಪರಿವೇಷದಲ್ಲಿ ಈ ವೇದಾಧ್ಯಯನವನ್ನು 'ಪುಷ್ಯೇ ತು ಛಂದಸಾಂ ಕುರ್ಯಾತ್ ಬಹಿಃ ಉತ್ಸರ್ಜನಂ ದ್ವಿಜಃ । ಮಾಘಶುಕ್ಲಸ್ಯ ವಾ ಪ್ರಾಪ್ತೇ ಪೂರ್ವಾಹ್ಣೇ ಪ್ರಥಮೇಽಹನಿ ॥' (ಮ.ಸ್ಮೃ. ೪.೯೬), ಎಂಬಂತೆ ತಿಷ್ಯಮಾಸದ ಹುಣ್ಣಿಮೆಯಲ್ಲಿ ವಿಸರ್ಜಿಸಬೇಕಾಗುವುದು. ಇದನ್ನು 'ಉತ್ಸರ್ಜನ'ವೆನ್ನುತ್ತೇವೆ.

ಸೂತ್ರಕಾರರ ಅನುಸಾರ ಪ್ರಯೋಗವನ್ನು ಮೊದಲು ನಿರೂಪಿಸಿ ನಂತರ ಈಗ ಪ್ರಚಲಿತವಿರುವ ಕ್ರಮವನ್ನೂ, ಪ್ರಯೋಗ ಸಂಗ್ರಹವನ್ನೂ ಬರೆಯುತ್ತೇವೆ. ಅದರಲ್ಲೂ ಆಪಸ್ತಂಬ ಸೂತ್ರದಂತೆ ಮೊದಲಿಗೆ.

ಅಗ್ನಿಪ್ರತಿಷ್ಠೆ ಹಿಡಿದು ಆಜ್ಯಭಾಗ ಪರ್ಯಂತ ಮಾಡಿದ ನಂತರ ಶಿಷ್ಯರೊಂದಿಗೆ ಕೂಡಿ ಆಚಾರ್ಯನು ಕಾಂಡಋಷಿಗಳಿಗೆ ಹೋಮವನ್ನು ಮಾಡುವುದು. ಕೃಷ್ಣಯಜುರ್ವೇದಕ್ಕೆ ಪ್ರಜಾಪತಿ, ಅಗ್ನಿ, ಸೋಮ, ವಿಶ್ವೇ ದೇವರುಗಳು, ಸಾಂಹಿತೀ, ಯಾಜ್ಞಿಕೀ, ವಾರುಣೀ ಉಪನಿಷತ್ತುಗಳೂ, ಸ್ವಯಂಭು ಬ್ರಹ್ಮ ಮತ್ತು ಸದಸಸ್ಪತಿಯೆಂಬ ಇಂದ್ರನೂ ಕಾಂಡಋಷಿಗಳು.

ಸೂತ್ರಕಾರರು ಸಾವಿತ್ರಿಗೂ, ವೇದಗಳಿಗೂ ಹೋಮವನ್ನು ವಿಧಿಸಿದ್ದಾರೆ. ನಂತರ ಉತ್ತರಾಂಗಗಳನ್ನು (ಪರಿಷೇಚನದ ವರೆಗೆ) ಮಾಡಿ, ವೇದಾದಿಯ ಮೂರು ಅನುವಾಕಗಳನ್ನು ಅಧ್ಯಯನ ಮಾಡಬೇಕು. ವೇದದ ಮೊದಲ ಮತ್ತು ಕೊನೆಯ ಅನುವಾಕಗಳನ್ನಾದರೂ ಅಧ್ಯಯನ ಮಾಡಬಹುದು. ಉಪಾಕರ್ಮವಾದ ಮೇಲೆ ಒಂದು ಅಥವಾ ಮೂರು ದಿನಗಳು ಬಿಟ್ಟು ವೇದಾಧ್ಯಯನವನ್ನು ತಪ್ಪದೆ ಮಾಡಬೇಕು. ಪ್ರಾರಂಭದಂತೆ ಅಧ್ಯಯನವು ವಿಹಿತ. ಇಲ್ಲಿ ಗಮನಿಸಬೇಕಾದದ್ದು ಅಧ್ಯಯನದ ಎರಡು ಪದ್ಧತಿಗಳಾದ ಪ್ರತಿಕಾಂಡೋಪಾಕರಣ ಅಥವಾ ಸರ್ವಕಾಂಡೋಪಾಕರಣ. ಮೊದಲನೇಯದಲ್ಲಿ, ಉತ್ಸರ್ಜನಕ್ಕೆ ಮುಂಚೆ ಸಂಪೂರ್ಣ ವೇದವನ್ನು ಅಧ್ಯಯನ ಮಾಡಲಾಗದಿದ್ದಾಗ, ಆಯಾ ಕಾಂಡದ ಋಷಿಗೆ ಮಾತ್ರ ಹೋಮವನ್ನು ಮಾಡಿ, ಒಂದು ದಿನ ಅನಧ್ಯಯನ (ಅಧ್ಯಯನ ವಿರಾಮ), ಆಯಾ ಕಾಂಡದ ಅಧ್ಯಯನ ಮಾಡಿದ ನಂತರ ಉತ್ಸರ್ಜನೆ ಇತ್ಯಾದಿ ಕ್ರಮ. ಎರಡನೇಯದಲ್ಲಿ, ಅಂದರೆ, ಎಲ್ಲ ಕಾಂಡಗಳ ಆರಂಭವನ್ನು ಉಪಕ್ರಮಿಸಿದ್ದಲ್ಲಿ (ಮೂರು ಮೂರು ಅನುವಾಕಗಳ ಅಥವಾ ಆದ್ಯಂತ ಅನುವಾಕಗಳ ಪ್ರಾರಂಭ) ಆಯಾ ಕಾಂಡಗಳನ್ನು (ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ, ಸ್ವಾಯಂಭುವ ಕಾಂಡಗಳನ್ನು) ಕ್ರಮವಾಗಿ ಅಧ್ಯಯನ ಮಾಡಬೇಕು.

ಹೀಗೆ ಉಪಾಕರ್ಮ ಮಾಡಿ ಅನಧ್ಯಯನಕಾಲವನ್ನು ಹೊರತು ಮಿಕ್ಕೆಲ್ಲ ಸಮಯಗಳಲ್ಲಿಯೂ ವೇದವನ್ನೋ ಕಾಂಡವನ್ನೋ ಅಧ್ಯಯನವ ಮಾಡುತ್ತಿದ್ದು ತಿಷ್ಯಮಾಸದ ಶುಕ್ಲಪಕ್ಷದಲ್ಲಿ ರೋಹಿಣಿಯಲ್ಲೋ ಪೌರ್ಣಿಮಿಯಂದೋ ಉತ್ಸರ್ಜನ ಮಾಡಬೇಕು. 'ತೈಷೀಪಕ್ಷಸ್ಯ ರೋಹಿಣ್ಯಾಂ ಪೌರ್ಣಮಾಸ್ಯಾಂ ವಾ ಉತ್ಸರ್ಗಃ' (ಆ.ಗೃ.ಸೂ. ಉಪಾಕರ್ಮೋತ್ಸರ್ಜನಪಟಲ. ೮). ಆಚಾರ್ಯನು ಶಿಷ್ಯರ ಗುಂಪಿನೊಡನೆ ಪೂರ್ವ ಅಥವಾ ಉತ್ತರ ದಿಕ್ಕಿನಲ್ಲಿ ಹೊರಟು ಎಲ್ಲಿ ಒಳ್ಳೆಯ ಸ್ಪರ್ಶದ ಅವಕೆಯೆಂಬ ಬಳ್ಳಿ, ಶಂಖಗಳನ್ನುಳ್ಳ, ಒಳ್ಳೆಯ ಸ್ನಾನಘಟ್ಟವುಳ್ಳ ಜಲಾಶಯವನ್ನು ಸೇರಿ, ಕೊಡಗಳಿಂದ ಸ್ನಾನ ಮಾಡಿ 'ದಧಿಕ್ರಾವ್ಣ್ಣಃ', 'ಆಪೋ ಹಿ ಷ್ಠಾ ಮಯೋಭುವಃ' ಎಂದಾರಂಭಿಸುವ ಮೂರು ಋಕ್ಕುಗಳು, 'ಅವ ತೇ ಹೇಡಃ', 'ಉದುತ್ತಮಮ್', 'ಇಮಂ ಮೇ ವರುಣ', 'ತತ್ ತ್ವಾ ಯಾಮಿ', 'ಹಿರಣ್ಯವರ್ಣಾಃ ಶುಚಯಃ ಪಾವಕಾಃ' ಎಂಬ ನಾಲ್ಕು ಋಕ್ಕುಗಳು, 'ಪವಮಾನಃ ಸುವರ್ಜನಃ' ಎಂಬ ಅನುವಾಕ ಇವುಗಳಿಂದ ಪ್ರೋಕ್ಷಿಸಿಕೊಂಡು, ನೀರಿನೊಳಗೆ ಮುಳುಗಿ ಅಘಮರ್ಷಣ ಸೂಕ್ತದಿಂದ ('ಋತಂ ಚ ಸತ್ಯಂ ಚ' ಎಂಬ ಮಂತ್ರಗಳಿಂದ) ಮೂರು ಪ್ರಾಣಾಯಾಮಗಳನ್ನು ಮಾಡಿ ದಡಕ್ಕೆ ಬಂದು ಒಣಗಿದ ಬಟ್ಟೆ ಉಟ್ಟು, ಆಚಮನ ಮಾಡಿ ಎದ್ದು ಇಬ್ಬಿಬ್ಬರಾಗಿ ಪರಸ್ಪರ ದರ್ಭೆಗಳನ್ನು ಕೊಟ್ಟು ಶುಚಿಯಾದ ಸ್ಥಳದಲ್ಲಿ ಪೂರ್ವಾಗ್ರವಾಗಿ ದೇವ, ಋಷಿ, ಪಿತೃಗಳಿಗೆ ಆಸನಗಳನ್ನು ಕಲ್ಪಿಸಬೇಕು. ದೇವತೀರ್ಥದಿಂದ ಉತ್ತರಕ್ಕೆ ಮುಗಿಯುವ ಆಸನಗಳಲ್ಲಿ ೨೫ ತರ್ಪಣ (ಬ್ರಹ್ಮ ಮೊದಲಾದ ೧೦ ದೇವತೆಗಳು, ಇಂದ್ರ ಮೊದಲಾದ ೫ ರಾಜರು, ವಸು ಮುಂತಾದ ೧೦ ದೇವಗಣಗಳು) ಬಿಡುವುದು. ಮುಂದೆ ದೇವತೆಗಳಿಗೆ ಉತ್ತರದಲ್ಲಿ ಉಪವೀತಿಯಾಗಿ ಋಷಿತೀರ್ಥದಿಂದ ಸಪ್ತರ್ಷಿಗಳಿಗೆ, ದಕ್ಷಿಣದಲ್ಲಿ ಅಗಸ್ತ್ಯರಿಗೆ, ಕಶ್ಯಪರಿಗೆ ಮೇಲೆ ಅರುಂಧತಿಗೆ ತರ್ಪಣ ಕೊಟ್ಟು ನಂತರ ಕೃಷ್ಣದ್ವೈಪಾಯನ ಮುಂತಾದ ೩೪ ಋಷಿಗಳಿಗೆ, ನಾಲ್ಕು ವೇದಗಳಿಗೆ ತರ್ಪಿಸುವುದು. ಆಮೇಲೆ ಪ್ರಾಚೀನಾವೀತದಲ್ಲಿ ದಕ್ಷಿಣಕ್ಕೆ ವೈಶಂಪಾಯನ ಮುಂತಾದ ೧೨ ಆಸನಗಳನ್ನು ಕಲ್ಪಿಸಿ ತರ್ಪಿಸುವುದು. ತದನಂತರ ತನ್ನ ಪಿತೃವರ್ಗ, ಮಾತೃವರ್ಗಕ್ಕೆ ಸೇರಿದ ಪಿತೃಗಳಿಗೆ ತರ್ಪಣ ಕೊಡುವುದು. ಎಲ್ಲ ಕಡೆಯಲ್ಲಿಯೂ ಆಯಾ ನಾಮವನ್ನು ಹೇಳಿ ತರ್ಪಯಾಮಿ ಎಂದು ಮೂರು ಬಾರಿ ತರ್ಪಿಸಬೇಕು. ಇಬ್ಬಿಬ್ಬರಾಗಿಯೂ ಮಾಡಬಹುದು.

ಉಪವೀತಿಯಾಗಿ ಆರಂಭದ ಮೂರು ಅನುವಾಕಗಳನ್ನು ಅಥವಾ ಕಾಂಡಗಳ ಮೊದಲ ಕೊನೆಯ ಅನುವಾಕಗಳನ್ನೋ ಅಧ್ಯಯನ ಮಾಡುವುದು (ಉಪಾಕರಣದಂತೆ). ಆಮೇಲೆ ಬೇರೊಡನೆ ಕೂಡಿದ ಗರಿಕೆ ಹುಲ್ಲನ್ನು ತಂದು ನೀರಿನ ದಡದಲ್ಲಿ ಮಣ್ಣನ್ನು ಅಗೆದು 'ಕಾಂಡಾತ್ ಕಾಂಡಾತ್ ಪ್ರರೋಹಂತೀ' ಎಂಬ ಎರಡು ಮಂತ್ರಗಳಿಂದ ನಡುವುದು. ಇದನ್ನು ಪ್ರಧಾನರು ಒಬ್ಬರು ಮಾತ್ರ ಮಾಡಬೇಕು. ನಂತರ ನೀರಲ್ಲಿ ಇಳಿದು ಸಮುದ್ರದಂತೆ ಕಲಕುವುದು. ಎಲ್ಲರೂ ಸೇರಿ ಅಲೆಗಳು ಏಳುವಂತೆ ಮಾಡುವರು. ದಡಕ್ಕೆ ಬಂದು ಪೂರ್ವ ಅಥವಾ ಉತ್ತರ ದಿಕ್ಕಿನಲ್ಲಿ ಏದುಸಿರು ಬರುವ ವರೆಗೆ ಓಡಬೇಕು. ಆಮೇಲೆ ಮನೆಗಳಿಗೆ ತೆರಳಿ ಹಿಟ್ಟು, ಅನ್ನ ಮುಂತಾದವುಗಳಿಂದ ಬ್ರಾಹ್ಮಣಭೋಜನ ಮಾಡಿಸಿ ಪುಣ್ಯಾಹ, ಸ್ವಸ್ತಿವಾಚನಗಳನ್ನು ಮಾಡಿಸಬೇಕು. ಹೀಗೆಯೇ ಪ್ರತಿದಿನ ದೇವ, (ಕಾಂಡ) ಋಷಿ, ಪಿತೃ ತರ್ಪಣವನ್ನು ನೀರಿನಿಂದ ಮಾಡಬೇಕು.

ಬೋಧಾಯನರ ಪ್ರಕಾರ - ಅಗ್ನಿಪ್ರತಿಷ್ಠಾದಿ ಅಗ್ನಿಮುಖಾಂತ ಮಾಡಿ, ನಾಲ್ಕು ಪ್ರಧಾನಾಹುತಿಗಳು - ಯಾಜ್ಞಿಕೀ, ಸಾಂಹಿತೀ, ವಾರುಣೀ ಮತ್ತು ಸರ್ವಾಭ್ಯಃ ದೇವತಾಭ್ಯಃ ಎಂದು. ನಂತರ ಕಾಂಡಋಷಿಹೋಮ - ಪ್ರಜಾಪತಿ, ಸೋಮ, ಅಗ್ನಿ, ವಿಶ್ವೇ ದೇವರು, ಸ್ವಯಂಭುಗಳಿಗೆ. ಆಮೇಲೆ ಸದಸಸ್ಪತಿಗೆ, ಸಾವಿತ್ರಿಗೆ, ವೇದಾಹುತಿಗಳು ನಾಲ್ಕು ವೇದಗಳಿಗೆ, ಅಥರ್ವಾಂಗಿರ, ಇತಿಹಾಸಪುರಾಣ, ಸರ್ಪದೇವಜನ, ಸರ್ವಭೂತಗಳಿಗೆ ಹೋಮ. ಇದರ ನಂತರ ವೇದದ ಮೊದಲ ಮೂರು ಅನುವಾಕಗಳನ್ನು ಅಥವಾ ಎಲ್ಲ ಕಾಂಡಗಳ ಪ್ರಾರಂಭ ಅನುವಾಕವನ್ನು ಅಧ್ಯಯನ ಮಾಡಬೇಕು. ಆಮೇಲೆ ಜಯಾದಿ ಮುಂತಾದ

ಉತ್ತರಾಂಗಗಳನ್ನು ಅನುಷ್ಠಿಸಬೇಕು. ಬೋಧಾಯನರು ಪ್ರತಿ ಕಾಂಡಕ್ಕೂ ವಿಸ್ತಾರವಾಗಿ ವ್ರತವನ್ನೂ ನಿಯಮಗಳನ್ನೂ ಹೇಳಿದ್ದಾರೆ.

ಈಗ ಪ್ರಚಲಿತ ಪ್ರಯೋಗವನ್ನು ಗಮನಿಸೋಣ. ಉಪಾಕರ್ಮ ಮಾತ್ರ ವಾಡಿಕೆಯಲ್ಲಿದೆಯೇ ಹೊರತು ಉತ್ಸರ್ಜನ ಮಾಡುವ ಪದ್ಧತಿ ಕಂಡು ಬರುವುದಿಲ್ಲ. 'ಪ್ರಾಪ್ತೇ ತುರ್ಯೇ ಯುಗೇಽಸ್ಮಿನ್ ಪರಿಮಿತ-ಬಲ-ಧೀ-ಪ್ರಾಣ-ತದ್ವಿಘ್ನದೃಷ್ಟ್ಯಾ ಕಾಲಕ್ಷೇಪಾಕ್ಷಮತ್ವಾತ್ ಕತಿಚನ ಕೃತಿನಃ ಶೀಘ್ರಮಂತೇ ರಮಂತೇ' ಎಂದು ಶ್ರೀಮದ್ವೇದಾಂತದೇಶಿಕರು ಅಧಿಕರಣ-ಸಾರಾವಳಿಯಲ್ಲಿ ಅಪ್ಪಣೆ ಕೊಟ್ಟಿರುವುದು ಕಾಲೋಚಿತವಾಗಿದೆ. ಅಂದರೆ ವೇದಾಧ್ಯಯನವೇ ಬಹಳ ವಿರಳವಾಗಿರುವುದ-ರಿಂದ ವರ್ಷಪೂರ್ತಿ ಅಧ್ಯಯನ ಮಾಡಿದರೂ ಪರವಾಗಿಲ್ಲ ಎಂದು ಭಾವನೆ. ಮತ್ತೆ, ಸಾಂಗೋಪಾಂಗವಾಗಿ ವೇದಾಧ್ಯಯನ ಈಗ ನಷ್ಟಪ್ರಾಯವಾಗಿ ಬಿಟ್ಟಿದೆ ಎಂಬ ಸಂಗತಿಯೇನೊ ಸತ್ಯವೇ. ಆದರೂ, ಪ್ರತಿ ವರ್ಷ ಉಪಾಕರ್ಮ ಅರ್ಥಾತ್ ಪ್ರಾರಂಭವೇ ಮಾಡುತ್ತಿದ್ದರೆ ಕೊನೆ ಇಲ್ಲದೆ ಮತ್ತೆ ಪ್ರಾರಂಭ ಏತಕ್ಕೆ? ಎಂಬ ಪ್ರಶ್ನೆ ಉದಿಸುವುದು. ಇದಕ್ಕೆ ಉತ್ತರ-ವಾಗಿ ಉಪಾಕರ್ಮದಂದು ಬೆಳಿಗ್ಗೆ, ತಿಷ್ಯಮಾಸದಲ್ಲಿ ವಿಹಿತವಾದ ಉತ್ಸರ್ಜನ ಮಾಡದಿದ್ದುದಕ್ಕೆ ಪ್ರಾಯಶ್ಚಿತ್ತವಾಗಿ, 'ಕಾಮೋಽಕಾರ್ಷೀತ್ ಮನ್ಯುರಕಾರ್ಷೀತ್' ಎಂಬ ಮಂತ್ರವನ್ನು ಜಪಿಸುವುದು ವಾಡಿಕೆಯಲ್ಲಿದೆ.

ಮಾಧ್ಯಾಹ್ನಿಕಾದಿ ಇಜ್ಯಾಕಾಲದ ಕೃತ್ಯಗಳನ್ನು ಮುಗಿಸಿ ಪುಣ್ಯನದಿ ಅಥವಾ ಜಲಾಶಯದಲ್ಲಿ ಉಪಾಕರ್ಮಕ್ಕಾಗಿ ಸ್ನಾನ ಮಾಡಿ ನೂತನ ಯಜ್ಞೋಪವೀತ ಧರಿಸಿ ನವಕಾಂಡಋಷಿ ತರ್ಪಣ ಮಾಡಿ ಅಧ್ಯಯನ ಹೋಮವನ್ನು ಮಾಡುವುದು. ಅಧ್ಯಯನಹೋಮದಲ್ಲಿ ಅಗ್ನಿಪ್ರತಿಷ್ಠೆಯಿಂದ ಹಿಡಿದು ಅಗ್ನಿಮುಖದ ವರೆಗೆ ಮಾಡಿ, ಶಿಷ್ಯರಿಂದೊಡಗೂಡಿ, ನವಕಾಂಡಋಷಿಹೋಮವನ್ನು ಪ್ರಧಾನಾಹುತಿಯಾಗಿ ಮಾಡಲಾಗುತ್ತದೆ. ಇದರ ನಂತರ ವೇದಾರಂಭ ಮೊದಲ ನಾಲ್ಕು ಅನುವಾಕಗಳೊಡನೆ ನಡೆಯುತ್ತದೆ. ಇದಾದ ಮೇಲೆ ಜಯಾದಿಹೋಮ, ಪ್ರಾಯಶ್ಚಿತ್ತ, ಪ್ರಾಣಾಯಾಮ, ಪರಿಷೇಚನ, ಪ್ರಣೀತಾಮೋಕ್ಷಣ, ಬ್ರಹ್ಮೋದ್ವಾಸನ, ಉಪಸ್ಥಾನ, ಅಭ್ಯುದಯ, ಪುಣ್ಯಾಹವೆಂಬ ಉತ್ತರಾಂಗಗಳನ್ನು ಮಾಡುವುದು. ಮಾರನೇಯ ದಿನ ಸಂವತ್ಸರದಲ್ಲಿ ಮಾಡಿದ ಮಿಥ್ಯಾಧ್ಯಯನದ ಪ್ರಾಯಶ್ಚಿತ್ತವಾಗಿ ಗಾಯತ್ರೀ ಜಪ ಅಥವಾ ಹೋಮ ಮಾಡುಲಾಗುತ್ತದೆ.

ಕಾಂಡಋಷಿಗಳು - ವಿವರಣೆ:

ಕೃಷ್ಣಯಜುರ್ವೇದದ ತೈತ್ತಿರೀಯ ಶಾಖೆಯಲ್ಲಿ ಸಂಹಿತಾ, ಬ್ರಾಹ್ಮಣ, ಆರಣ್ಯಕ, ಉಪನಿಷತ್ ಭಾಗಗಳು ಪೂರ್ವ-ಕಾಲದಲ್ಲಿ ಸ್ಪಷ್ಟ ವಿಭಾಗದೊಡನೆ ಕ್ಲಪ್ತವಾಗಿದ್ದವು. ನಂತರ ವೈಶಂಪಾಯನ ಶಿಷ್ಯರಾದ ಯಾಜ್ಞವಲ್ಕ್ಯರ ಒಂದು ಘಟನೆಯ ವೃತ್ತಾಂತದಂತೆ ಶುಕ್ಲ, ಕೃಷ್ಣವೆಂಬ ಭೇದವೇರ್ಪಟ್ಟು ಈಗಿನ ಕೃಷ್ಣಯಜುರ್ವೇದದ ಆನುಪೂರ್ವಿ (ಕ್ರಮ) ಯಲ್ಲಿ ಸಂಹಿತಾ ಬ್ರಾಹ್ಮಣ ಭಾಗಗಳ ಮಿಶ್ರಣವುಂಟಾಗಿರುವ ಕಾರಣ ಸಾರಸ್ವತಪಾಠವೆನ್ನಲಾಗಿದೆ. ಪ್ರಾಚೀನ ಕ್ರಮಕ್ಕೆ ಆರ್ಷೇಯ ಪಾಠವೆಂದು ವ್ಯವಹಾರ. ಈ ಪ್ರಾಚೀನ ಪಾಠದ ಸ್ವರೂಪ ಕಾಂಡಾನುಕ್ರಮಣಿಕೆ ಎಂಬ ಗ್ರಂಥದಲ್ಲಿ ವಿವರಿಸ-ಲಾಗಿದೆ. ಅದರಂತೆ ಬೋಧಾಯನರು ಈ ವಿಭಾಗವನ್ನು ಉಪಾಕರ್ಮದಲ್ಲಿ ಕಾಂಡಋಷಿಗಳ ತರ್ಪಣದ ಪ್ರಕರಣದಲ್ಲಿ ಸ್ಮರಿಸಿರುತ್ತಾರೆ. ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ ಮತ್ತು ಸ್ವಾಯಂಭುವ ಕಾಂಡಗಳೂ ಅವುಗಳಿಗೆ ಸೇರಿದ ವೇದಭಾಗಗಳೂ ಹೇಳಲ್ಪಟ್ಟಿವೆ. ಉಪನಿಷತ್ತುಗಳಲ್ಲಿ ಸಾಂಹಿತೀ, ಯಾಜ್ಞಿಕೀ ಮತ್ತು ವಾರುಣೀ ಉಪನಿಷತ್ತುಗಳೆಂಬ ಭಾಗಗಳಿರುವುವು. ಸದಸಸ್ಪತಿ ಎಂಬ ಇಂದ್ರನಿಗೂ ಕೊನೆಯದಾಗಿ ಈ ಶಾಖಿಗಳು ಋಣಿಗಳು. ಅಂತೆಯೇ ಈ ಒಂಭತ್ತು ಕಾಂಡಋಷಿಗಳಿಗೆ ತರ್ಪಿಸಿ (ಅವರನ್ನು ಭಕ್ತಿಪೂರ್ವಕ ಸ್ಮರಿಸಿ) ಆಮೇಲೆ ವೇದವನ್ನು ಹೇಳಬೇಕು ಎಂದು ತಾತ್ಪರ್ಯ.

ಆರ್ಷೇಯ ಪಾಠದ ಸ್ವರೂಪ (ಬೋ.ಗೃ.ಸೂ. ೩.೨.೨೧-೨೫) -

1) ಪ್ರಾಜಾಪತ್ಯಕಾಂಡ - ಪೌರೋಡಾಶಿಕಂ, ಯಾಜಮಾನಂ, ಹೋತಾರಃ, ಹೌತ್ರಂ, ಪೈತೃಮೇಧಃ ಮತ್ತು ಇವುಗಳ ಬ್ರಾಹ್ಮಣ, ಅನುಬ್ರಾಹ್ಮಣಗಳು.

2) ಸೌಮ್ಯಕಾಂಡ - ಆಧ್ವರಂ, ಗ್ರಹಾಃ, ದಾಕ್ಷಿಣಾನಿ, ಸಮಿಷ್ಟಯಜೂಂಷಿ, ಅವಭೃಥಯಜೂಂಷಿ, ವಾಜಪೇಯಃ, ಶುಕ್ರಿಯಾಣಿ, ಸವಾಃ ಮತ್ತು ಇವುಗಳ ಬ್ರಾಹ್ಮಣ, ಅನುಬ್ರಾಹ್ಮಣಗಳು.

3) ಆಗ್ನೇಯಕಾಂಡ - ಅಗ್ನ್ಯಾಧೇಯಮ್, ಅಗ್ನಿಹೋತ್ರಂ, ಅಗ್ನ್ಯುಪಸ್ಥಾನಂ, ಅಗ್ನಿಚಯನಂ, ಸಾವಿತ್ರಂ, ನಾಚಿಕೇತಂ, ಚಾತುರ್ಹೋತ್ರಿಯಂ, ವೈಶ್ವಸೃಜಾರುಣಾಃ ಮತ್ತು ಇವುಗಳ ಬ್ರಾಹ್ಮಣ, ಅನುಬ್ರಾಹ್ಮಣಗಳು.

4) ವೈಶ್ವದೇವಕಾಂಡ - ರಾಜಸೂಯಃ, ಪಶುಬಂಧಃ, ಇಷ್ಟಯಃ, ನಕ್ಷತ್ರೇಷ್ಟಯಃ, ದಿವಶ್ಯೇನಯಃ, ಅಪಾಘಾಃ,

ಸಾತ್ರಾಯಣಂ, ಉಪಹೋಮಾಃ, ಕೌಕಿಲೀಸೂಕ್ತಾನಿ, ಔಪಾನುವಾಕ್ಯಂ, ಯಾಜ್ಯಾ, ಅಶ್ವಮೇಧಃ, ಪುರುಷಮೇಧಃ, ಸೌತ್ರಾಮಣೀ, ಅಚ್ಛಿದ್ರಾಣಿ, ಪಶುಹೌತ್ರಂ, ಉಪನಿಷದಃ ಮತ್ತು ಇವುಗಳ ಬ್ರಾಹ್ಮಣ, ಅನುಬ್ರಾಹ್ಮಣಗಳು.

5) ಸ್ವಾಯಂಭುವಕಾಂಡ - ಸ್ವಾಧ್ಯಾಯಬ್ರಾಹ್ಮಣ (ಕಾಠಕದಲ್ಲಿ ಪಠಿತವಾದ ವಿಧಿ).

ಈ ಕಾಂಡಗಳಿಗೂ ಈಗಿನ ಸಂಹಿತಾ ಕಾಂಡ, ಬ್ರಾಹ್ಮಣ ಅಷ್ಟಕ, ಪ್ರಶ್ನಗಳಿಗೂ ಸಮನ್ವಯ ಬೇರೊಂದು ಸಲ ಪ್ರತಿಪಾದಿಸೋಣ. ಈಗ ವಿವಾಹದ ಮುಂಚೆ ಪ್ರಚಲಿತವಿರುವ ಸ್ನಾತಕ ವ್ರತ, ಸಮಾವರ್ತನಗಳಲ್ಲೂ ಈ ಕಾಂಡಗಳಿಗೇ ಉಪಾಕರಣ ಮತ್ತು ಸಮಾಪನ ಮಾಡಲಾಗುತ್ತದೆ.

ಹೀಗೆ ದೇವ, ಋಷಿ, ಪಿತೃಗಳಿಗೆ ಋಣಿಗಳಾದ ನಾವು ಬ್ರಹ್ಮಚರ್ಯ, ಅಂದರೆ ವೇದಾಧ್ಯಯನದಿಂದ ಋಷಿಗಳ, ಯಜ್ಞಗಳಿಂದ (ದೇವರಪೂಜೆ) ದೇವತೆಗಳ ಮತ್ತು ಸತ್ಪ್ರಜೆಗಳಿಂದ ಪಿತೃಗಳ ಋಣವನ್ನು ತೀರಿಸಿ ಮೂರೂ ಲೋಕಗಳಲ್ಲೂ ಅನೃಣರಾಗಬೇಕೆಂದು ವೇದ ಆಶಿಸುತ್ತದೆ ಮತ್ತು ಆಜ್ಞಾಪಿಸುತ್ತದೆ. ಈ ಅರ್ಥಗಳು 'ಜಾಯಮಾನೋ ವೈ ಬ್ರಾಹ್ಮಣಃ ತ್ರಿಭಿಃ ಋಣವಾ ಜಾಯತೇ ಬ್ರಹ್ಮಚರ್ಯೇಣ ಋಷಿಭ್ಯಃ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿವಾಸೀ' (ತೈ.ಸಂ. ೬.೩.೧೦), 'ಅನೃಣಾ ಅಸ್ಮಿನ್ ಅನೃಣಾಃ ಪರಸ್ಮಿನ್ ತೃತೀಯೇ ಲೋಕೇ ಅನೃಣಾಃ ಸ್ಯಾಮ । ಯೇ ದೇವಯಾನಾ ಉತ ಪಿತೃಯಾಣಾಃ ಸರ್ವಾನ್ ಪಥೋ ಅನೃಣಾ ಆಕ್ಷೀಯೇಮ ॥' (ತೈ.ಆ. ೨.೧೭) ಎಂಬ ಶ್ರುತಿವಾಕ್ಯಗಳಿಂದ ತಿಳಿಯುತ್ತವೆ.

ಪ್ರೀಯತಾಂ ವೇದವೇದ್ಯೋ ಜನಾರ್ದನಃ ।

ಶುಭಮಸ್ತು ।